**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.1/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ನರಸಿಂಹ ವಿ. ತಾಮ್ರಧ್ವಜ |
| ತಂದೆಯ/ಗಂಡನ ಹೆಸರು | : | ವಿಠೋಬಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಡಿವೈ.ಎಸ್.ಪಿ. ಕರ್ನಾಟಕ ಅಕಾಡೆಮಿ, ಮೈಸೂರು |
| ವಾಸ ಸ್ಥಳ | : | ಮೈಸೂರು |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನಾನುದಾವಣಗೆರೆಯ ಗ್ರಾಮಾಂತರ ಉಪವಿಭಾಗದಲ್ಲಿ ದಿಃ 23-05-2020 ರಿಂದ ದಿಃ 04-10-2021 ರವರೆಗೆ ಉಪಾಧೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ ದಿಃ 30-01-2021 ರದದಿದು ಮಧ್ಯಾಹ್ನ 1.30 ಗಂಟೆಗೆ ನಾನು ಬಂದುಬಸ್ತು ಕರ್ತವ್ಯದಲ್ಲಿರುವಾಗ ಬಾತ್ಮಿದಾರರು ಫೋನ್ ಮಾಡಿ ಜಗಳೂರು ತಾಲ್ಲೂಕು ಮೆದಿಕೆರೆನಹಳ್ಳಿ ಗ್ರಾಮದಲ್ಲಿ ದಂಡೆಪ್ಪರವರುತಮ್ಮ ಜಮೀನಿನಲ್ಲಿ ಗಾಂಜಾ ಬೆಳೆದು ಮಾರಾಟ ಮಾಡುವ ಸಲುವಾಗಿ ಅದೇ ಜಮೀನಿನಲ್ಲಿರುವ ದನದ ಮನೆಯಲ್ಲಿ ಸಂಗ್ರಹಿಸಿಟ್ಟಿರುವುದಾಗಿ ಬಾತ್ಮಿ ಬಂದಿತು. ಸದರಿ ಮಾಹಿತಿಯನ್ನು ನಾನು ಪೊಲೀಸ್ ಅಧೀಕ್ಷಕರಿಗೆ ತಿಳಿಸಿ, ನಂತರ ಕೂಡಲೇ ಬಿಳಿಚೋಡ ಪೊಲೀಸ್ ಠಾಣೆಗೆ ಬಂದು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ನಂತರ ದಾವಣಗೆರೆ ಗ್ರಾಮಾಂತರ ಸಿ.ಪಿ.ಐ. ಚಾಸಾ-4 ರವರಿಗೆ ಮತ್ತು ಅವರ ಸಿಬ್ಬಂದಿಗೆ

ಹಾಗೂ ನಮ್ಮ ಕಛೇರಿಯ ಸಿಬ್ಬಂದಿಯವರಿಗೆ ಠಾಣೆಗೆ ಬರಲು ಹೇಳಿದೆನು. ನಂತರ ತಾಲ್ಲೂಕು ಪಂಚಾಯಿತಿ EO ರವರಿಗೆ ಅವರ ಕಛೇರಿಯ ಇಬ್ಬರು ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸಿಕೊಡುವಂತೆ ಕೇಳಿರುತ್ತೇನೆ. ಅದರಂತೆ ಚಾಸಾ-2 ಮತ್ತು 3 ರವರು ನಮ್ಮ ಠಾಣೆಗೆ ಬಂದರು. ಸಿಬ್ಬಂದಿಗಳಾದ ಚಾಸಾ-4 ರಿಂದ 8 ರವರು ಪೊಲೀಸ್ ಠಾಣೆಗೆ ಬಂದರು. ನಂತರ ಚಾಸಾ-2 ಮತ್ತು 3 ರವರಿಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚನಾಮೆಗೆ ಸಹಕರಿಸಲು ನೋಟಿಸ್ಸು ನೀಡಿರುತ್ತೇನೆ. ಆ ನೋಟಿಸ್ಸನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ನೋಟಿಸ್ಸನ್ನು ನಿಪಿ-1 ಅಂತ, ಸಾಕ್ಷಿ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು.

2. ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಹಾಗೂ ಉಪಕರಣಗಳನ್ನು ತೆಗೆದುಕೊಂಡು ನಮ್ಮ ಇಲಾಖಾ ವಾಹನದಲ್ಲಿ ಮೆದಿಕೆರೆನಹಳ್ಳಿ ಗ್ರಾಮದ ದಂಡೆಪ್ಪರವರ ಜಮೀನಿನ ಮುಂಭಾಗಕ್ಕೆ ಹೋದೆವು. ಆಗ ಸಮಯ ಮಧ್ಯಾಹ್ನ 3.50 ಗಂಟೆ ಆಗಿತ್ತು. ನಂತರ ಜೀಪಿನಿಂದ ಇಳಿದು ದಂಡೆಪ್ಪರವರ ಜಮೀನಿನಲ್ಲಿರುವ ದನದ ಮನೆಯ ಹತ್ತಿರಹೋಗಿ ನೋಡಿದಾಗ ಅಲ್ಲಿ ಒಬ್ಬ ವಯಸ್ಸಾದ ವ್ಯಕ್ತಿ ಇದ್ದರು. ಅವರನ್ನು ವಿಚಾರಣೆ ಮಾಡಿದಾಗ, ಅವರು ತನ್ನ ಹೆಸರು ದಂಡೆಪ್ಪ ತಂದೆ ಫಕೀರಪ್ಪ ಅಂತ ತಿಳಿಸಿದರು. ನಂತರ ಸದರಿ ವ್ಯಕ್ತಿಗೆ ನನ್ನ ಪರಿಚಯ ಮಾಡಿಕೊಂಡು, ಬಂದ ಮಾಹಿತಿಯ ಬಗ್ಗೆ ತಿಳಿಸಿದೆನು ಮತ್ತು ದನದಮನೆಯನ್ನು ಶೋಧನೆ ಮಾಡಲು ಕೇಳಿದಾಗ ಅವರು ಒಪ್ಪಿದರು. ನಂತರ ಅವರ, ಪಂಚರ, ತನಿಖಾ ತಂಡದವರ ಸಮಕ್ಷಮದಲ್ಲಿ ಪರಸ್ಪರ ಅಂಗ ಶೋಧನೆ ಮಾಡಿಕೊಂಡು, ನಮ್ಮ ಹತ್ತಿರಯಜಾವುದೇ ಗಾಂಜಾಕ್ಕೆ ಸಂಬಂಧಪಟ್ಟ ವಸ್ತು ಇಲ್ಲ ಅಂತ ಖಚಿತಪಡಿಸಿಕೊಂಡೆವು. ನಂತರ ದಂಡೆಪ್ಪರವರ ಮನೆಯ ಒಳಗಡೆ ಹೋದಂತೆ ನಾವು ಅವರನ್ನು ಹಿಂಬಾಲಿಸಿದೆವು. ಆ ಮನೆಯ ದಕ್ಷಿಣ ಗೋಡೆಯ ಮೇಲೆ ಒಂದು ಮರದ ಹಲಗೆ ಇದ್ದು ಅದರ ಮೇಲೆ ರಟ್ಟಿನ ಬಾಕ್ಸ ಇತ್ತು. ಆ ರಟ್ಟಿನ ಬಾಕ್ಸನ್ನು ದಂಡೆಪ್ಪರವರು ತೋರಿಸಿಕೊಟ್ಟರು. ಅದರಲ್ಲಿ ಒಣಗಿದ ಗಾಂಜಾ ಸೊಪ್ಪು ಇತ್ತು. ಅದರಿಂದ ಗಾಟು ವಾಸನೆ ಬರುತ್ತಿತ್ತು

ಮತ್ತು ಅದು ಹೂವು ಮತ್ತು ಸೊಪ್ಪಿನಿಂದ ಕೂಡಿದ್ದರಿಂದ ಅದು ಗಾಂಜಾ ಅಂತ ಖಚಿತಪಡಿಸಿಕೊಂಡೆವು. ನಂತರ ತೂಕದ ಯಂತ್ರದಿಂದ ತೂಕ ಮಾಡಿದಾಗ ಅದು 380 ಗ್ರಾಂ. ಗಾಂಜಾ ಇದ್ದು, ಅದು ಅಂದಾಜು ಮೊತ್ತ ₹10,000/- ರೂಪಾಯಿ ಆಗಬಹುದುಅಂತ ಅಂದಾಜಿಸಲಾಯಿತು. ನಂತರ ಅದರಲ್ಲಿ 100 ಗಾಂ. ಗಾಂಜಾವನ್ನು ಮಾದರಿಗಾಗಿ ತೆಗೆದು ಅದನ್ನು ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು.

3. ನಂತರ ಸದರಿ ವ್ಯಕ್ತಿಗೆ ಈ ಗಾಂಜಾವನ್ನು ಎಲ್ಲಿ ಬೆಳೆದಿರುವುದಾಗಿ ಅಂತ ವಿಚಾರಿಸಿದಾಗ, ಸದರಿ ವ್ಯಕ್ತಿಯು ತಮ್ಮ ಜಮೀನಿನಲ್ಲಿ ಬೆಳೆದಿದ್ದು, ಅದನ್ನು ತನ್ನ ಜೊತೆ ಬಂದರೆ ತೋರಿಸುತ್ತೇನೆ ಅಂತ ತಿಳಿಸಿದ್ದು, ನಂತರ ಅವರು ಹೋದಂತೆ ನಾವು ಅವರನ್ನು ಹಿಂಬಾಲಿಸಿಕೊಂಡು ಹೋಗಿದ್ದು, ಅವರು ಅವರ ಬದನೆ ಬೆಳೆದಿರುವ ಜಮೀನಿಗೆ ಕರೆದುಕೊಂಡು ಹೋಗಿದ್ದು, ಅದರ ಮಧ್ಯಭಾಗದಲ್ಲಿ ಸಾರ್ವಜನಿಕರಿಗೆ ಮೇಲನೋಟಕ್ಕೆ ಕಾಣದಂತೆ ಇರುವ ಜಾಗದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದರು. ನಂತರ ಸದರಿ ಗಾಂಜಾ ಗಿಡಗಳನ್ನು ಕೀಳುವ ಸಲುವಾಗಿ ಪಕ್ಕದ ಜಮೀನಿನಲ್ಲಿ ಟ್ರ್ಯಾಕ್ಟರ್ ನ ಮೂಲಕ ಉಳುಮೆ ಮಾಡುತ್ತಿದ್ದ ವ್ಯಕ್ತಿಯನ್ನು ನಮ್ಮ ಸಿಬ್ಬಂದಿ ಮೂಲಕ ಕರೆಸಿಕೊಂಡು, ಅವರ ಹೆಸರು ಕೇಳಿದಾಗ, ತನ್ನ ಹೆಸರು ಬಸವರಾಜ (ಚಾಸಾ-11) ಅಂತ ಹೇಳಿದರು. ಚಾಸಾ-11 ರವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಅಲ್ಲಿ ಬೆಳೆದಿರುವ ಗಾಂಜಾ ಗಿಡಗಳನ್ನು ಕೀಳುವಂತೆ ಕೇಳಿದಾಗ ಅವರು ಒಪ್ಪಿಕೊಂಡರು. ನಂತರ ಚಾಸಾ-11 ರವರಿಂದ ಆ ಜಮೀನಿನ ತುಂಬಾ ಓಡಾಡಿ ಪರಿಶೀಲಿಸಿ ಸುಮಾರು 45 ಇಂಚು ಉದ್ದದ 08 ಗಾಂಜಾ ಗಿಡಗಳನ್ನು ಹಾಗೂ ಸುಮಾರು 30 ಇಂಚು ಉದ್ದದ 24 ಗಾಂಜಾ ಗಿಡಗಳನ್ನು ಕೀಳಿಸಲಾಯಿತು.

4. ನಂತರ ತನಿಖಾ ಕಾಲಕ್ಕೆ ತಂದಿದ್ದ ಎಲೆಕ್ಟ್ರಾನಿಕ್ ಯಂತ್ರದಿಂದ ಗಾಂಜಾ ಗಿಡಗಳನ್ನು ತೂಕ ಮಾಡಿ ನೋಡಿದಾಗ ಅದು 650 ಗ್ರಾಂ. ನಷ್ಟು ಇತ್ತು. ಅದರಲ್ಲಿ 125 ಗ್ರಾಂ.ನಷ್ಟು 03 ಗಾಂಜಾಗಳನ್ನು ಮಾದರಿಗಾಗಿ ತೆಗೆದುಕೊಂಡು ಪ್ಯಾಕ್ ಮಾಡಿ, ಸೀಲ್ ಮಾಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 03-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

5. ಒಟ್ಟು ಅಮಾನತ್ತುಪಡಿಸಿಕೊಂಡಿರುವಂತಹ ಒಣಗಿದ ಹೂವು ಮಿಶ್ರಿತ ಗಾಂಜಾ ಮತ್ತು ಸೊಪ್ಪು ಹಸಿ ಗಾಂಜಾ 1 ಕೆ.ಜಿ. 30 ಗ್ರಾಂ. ತೂಕ ಇರುತ್ತದೆ. ಇದರ ಅಂದಾಜು ಬೆಲೆ ₹12,000/- ರೂಪಾಯಿ ಆಗಬಹುದು. ಈ ಪಂಚನಾಮೆಯನ್ನು ಸಂಜೆ 4.00 ರಿಂದ 5.45 ಗಂಟೆಯವರೆಗೆ ಮಾಡಲಾಯಿತು. ಆ ಪಂಚನಾಮೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಪಂಚನಾಮೆಯನ್ನು ನಿಪಿ-2 ಅಂತ, ಸಾಕ್ಷಿ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಲಾಯಿತು. ಕಚ್ಚಾ ನಕಾಶೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಕಚ್ಚಾ ನಕಾಶೆಯನ್ನು ನಿಪಿ-3 ಅಂತ, ಸಾಕ್ಷಿ ಸಹಿಯನ್ನು ನಿಪಿ-

3(ಎ) ಅಂತ ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೋಗಳನ್ನು ಈಗ ನೋಡಿ ಗುರುತಿಸುತ್ತೇನೆ. ಆ ಫೋಟೋಗಳನ್ನು ಕ್ರಮವಾಗಿ ನಿಪಿ-4 ರಿಂದ 21 ಅಂತ ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಪಿ.ಪಿ.ಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ ಬಟ್ಟೆ ಚೀಲವನ್ನು ತರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.) ಅಮಾನತ್ತುಪಡಿಸಿಕೊಂಡಿರುವ ಒಣ ಗಾಂಜಾದ Sample ನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.1 ಅಂತ ಗುರುತಿಸಲಾಯಿತು. ಬೇರು ಸಮೇತ ಇರುವಂತಹ ಗಾಂಜಾವನ್ನು ಈಗ ನೋಡುತ್ತಿದ್ದು, ಅದನ್ನು ಮು.ಮಾ.2 ಅಂತ ಗುರುತಿಸಲಾಯಿತು. ಸಾಕ್ಷಿದಾರರು ಹೇಳುತ್ತಾರೆ ಮು.ಮಾ.2 ನ್ನು ವಶಪಡಿಸಿಕೊಂಡಾಗ ಅದು ಹಸಿ ಇತ್ತು ಈಗ ಒಣಗಿದೆ. ಅಮಾನತ್ತುಪಡಿಸಿಕೊಂಡಿರುವ ಮಾಲುಗಳು ಮತ್ತು ವಶಪಡಿಸಿಕೊಂಡ ಆರೋಪಿಯನ್ನು ಬಿಳಿಚೋಡು ಪೊಲೀಸ್ ಠಾಣೆಗೆ ಹೋಗಿ ಠಾಣೆಯ SHO ರವರ ಮುಂದೆ ಹಾಜರುಪಡಿಸಿ ದೂರನ್ನು ದಾಖಲು ಮಾಡಿದ್ದೇನೆ. ನಾನು ಕೊಟ್ಟ ದೂರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ದೂರನ್ನು ನಿಪಿ-22 ಅಂತ, ಸಾಕ್ಷಿ ಸಹಿಯನ್ನು ನಿಪಿ-22(ಎ) ಅಂತ ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

6. ಪಂಚನಾಮೆ ಮಾಡುವ ಕಾಲಕ್ಕೆ ಚಾಸಾ-6 ರವರಿಂದ ಫೋಟೋಗಳನ್ನು ತೆಗೆಸಿರುತ್ತೇನೆ. ಚಾಸಾ-6 ರವರಿಂದ 65B ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. 65B ಪ್ರಮಾಣ ಪತ್ರವನ್ನು ಈಗ ನೋಡಿ ಅದರಲ್ಲಿರುವ ನನ್ನ ಸ್ವೀಕೃತಿ ಸಹಿಯನ್ನು ಗುರುತಿಸುತ್ತೇನೆ. 65B ಪ್ರಮಾಣ ಪತ್ರವನ್ನು ನಿಪಿ-23 ಅಂತ, ಸಾಕ್ಷಿ ಸಹಿಯನ್ನು ನಿಪಿ-23(ಎ) ಅಂತ ಗುರುತಿಸಲಾಯಿತು. ಎಸ್.ಪಿ. ರವರು ಈ ಪ್ರಕರಣದಲ್ಲಿ ನನಗೆ ದಾಳಿ ನಡೆಸಲು ಆದೇಶ ಮಾಡಿರುತ್ತಾರೆ. ಆ ಆದೇಶ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-24 ಅಂತ ಗುರುತಿಸಲಾಯಿತು. ಈ ಬಗ್ಗೆ ನಾನು ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೇನೆ. ಈ ದಿನ

ದಿಃ 30-01-2021 ರಂದು ಒಂದು ದಿನದ Station House Dairy ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-25 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ., ವಕೀಲರಿಂದ ಆರೋಪಿತರ ಪರವಾಗಿ**:

7. ದಿಃ 30-01-2021 ರಂದು ಮಧ್ಯಾಹ್ನ 1.30 ಗಂಟೆಗೆ ನನಗೆ ಮಾಹಿತಿ ಬಂದಿತು. ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ಕೂಡಲೇ ಪೋನ್ ಮುಖಾಂತರ ತಿಳಿಸಿರುತ್ತೇನೆ. ಪೋನ್ ಮುಖಾಂತರ ವಿಷಯ ತಿಳಿಸಿದ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಮೆದಿಕೆರನಹಳ್ಳಿಯು ದಾವಣಗೆರೆ-ಜಗಳೂರು ರಸ್ತೆಯ ಎಡಭಾಗಕ್ಕೆ ಬರುತ್ತದೆ ಅಂದರೆ ಈಗ ನನಗೆ ನೆನಪಿಲ್ಲ. ಸುಮಾರು 6 ಕಿ.ಮೀ. ಅಂತರದಲ್ಲಿ ಬಿಳಿಚೋಡು ಪೊಲೀಸ್ ಠಾಣೆಯಿಂದ ಮೆದಿಕೆರನಹಳ್ಳಿ ಇರುತ್ತದೆ. ಸದರಿ ರಸ್ತೆಯ ಪಶ್ಚಿಮ ಭಾಗದಲ್ಲಿ ಆರೋಪಿಯ ಜಮೀನು ಇರುತ್ತದೆ ಅಂದರೆ ನಿಜ. ಆರೋಪಿಯ ಜಮೀನು ನೀರಾವರಿ ಜಮೀನು ಅಂದರೆ ನನಗೆ ನೆನಪಿಲ್ಲ. ಆರೋಪಿಯ ಜಮೀನು ದಾಟಿದ ನಂತರ ನೀರಾವರಿ ಜಮೀನು ಇವೆ ಅಂದರೆ ನೆನಪಿಲ್ಲ. ಆರೋಪಿಯ ಜಮೀನಿನ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಸಹ ನೀರಾವರಿ ಜಮೀನು ಇವೆ ಅಂದರೆ ನನಗೆ ನೆನಪಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಸ್ಥಳದ ಚಕ್ಕುಬಂದಿ ಗಮನಿಸಿದ್ದೇನೆ. ಆರೋಪಿಯ ಜಮೀನಿನ ಚಕ್ಕುಬಂದಿಯಲ್ಲಿ ಬದುವಿನಲ್ಲಿ ಮರಗಳು ಬೆಳೆದಿವೆ ಅಂದರೆ ನಿಜ. ಆರೋಪಿಯ ಜಮೀನು ರಸ್ತೆಗೆ ಹೊಂದಿಕೊಂಡು ಇರುತ್ತದೆ ಅಂದರೆ ಟಾರ್ ರಸ್ತೆಯಿಂದ 100 ಮೀ. ದೂರದಲ್ಲಿದೆ.

8. ಆರೋಪಿಯ ಜಮೀನಿನಲ್ಲಿ ಎರಡು ಸಣ್ಣ ಶಡ್ ಇವೆ ಮತ್ತು ಅವು ಪೂರ್ವಾಭಿಮುಖವಾಗಿವೆ ಅಂದರೆ ಒಂದು ಶಿಟಿನ ಮನೆ ಇದೆ. ಆ ಶಿಟಿನ ಮನೆ ಎರಡು ಭಾಗವಾಗಿ ಇವೆ ಅಂದರೆ ನಿಜ. ಆರೋಪಿಯ ಜಮೀನನ್ನು ನಾವು ನೋಡಿದಾಗ ಮೇಲನೋಟಕ್ಕೆ ಸಾರ್ವಜನಿಕರಿಗೆ ಬದನೆ ಬೆಳೆ ಅಂತ ಕಾಣುವಂತೆ ಬೆಳೆದಿರುತ್ತಾರೆ. ಆ ಬದನೆ ಬೆಳೆಯ ಸಾಲುಗಳು ಪೂರ್ವ-ಪಶ್ಚಿಮ ಅಥವಾ ದಕ್ಷಿಣ-

ಉತ್ತರವಾಗಿ ಇವೆಯಾ ಅಂದರೆ ನನಗೆ ನೆನಪಿಲ್ಲ. ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಗಾಂಜಾ ಗಿಡಗಳನ್ನು ಬೆಳೆದಿದ್ದರು ಅಂದರೆ ಆರೋಪಿಯು ಬದನೆ ಗಿಡಗಳ ಮಧ್ಯ ಸಾರ್ವಜನಿಕರಿಗೆ ಕಾಣದಂತೆ ಗಾಂಜಾ ಗಿಡಗಳನ್ನು ಬೆಳೆದಿರುತ್ತಾರೆ. ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ಗಾಂಜಾ ಗಿಡಗಳು ಇದ್ದವು ಅಂದರೆ ಬದನೆ ಬೆಳೆ ಬಹಳ ಇದ್ದವು ಅವುಗಳನ್ನು ಎಣಿಸಲು ಆಗಲಿಲ್ಲ. ಹೂವು ಸಮೇತ ಗಾಂಜಾವನ್ನು ನಾವು ತೂಕ ಮಾಡಿದೆವು. ಒಣಗಿದ ಗಾಂಜಾದ ಹೂವು ಮತ್ತು ಕಾಯಿ separate ಮಾಡಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಒಣಗಿದ ಗಾಂಜಾ ಹೂವು ಸಮೇತ ಕೂಡಿರುವುದರಿಂದ ಅದನ್ನು ಬೇರ್ಪಡಿಸಿಲ್ಲ. ಗಾಂಜಾ ಗಿಡದ ಹೂವು ಮತ್ತು ಕಾಯಿ ಒಟ್ಟಿಗೆ ತೂಕ ಮಾಡಿದ್ದೇವೆ. ನಾವು ತೂಕ ಮಾಡುವ ಕಾಲಕ್ಕೆ ಸಂಜೆ ಕತ್ತಲಾಗುತ್ತಿರುವುದರಿಂದ ಹೂವು ಮತ್ತು ಕಾಯಿಯನ್ನು ಒಟ್ಟಿಗೆ ತೂಕ ಮಾಡಿದ್ದೇವೆ. ತೂಕದ ಯಂತ್ರವು ಸರಿಯಾಗಿದೆ ಇಲ್ಲವೋ ಎಂಬುವುದನ್ನು ಬೇರೆಯವರ ಕಡೆಯಿಂದ ಅಭಿಪ್ರಾಯ ಪಡೆದುಕೊಂಡಿದ್ದೀರಾ ಅಂದರೆ ಪಂಚರ ಅಭಿಪ್ರಾಯವನ್ನು ಪಡೆದುಕೊಂಡಿದ್ದೇನೆ.

ಆರೋಪಿಯು ತನ್ನ ಜಮೀನಿನಲ್ಲಿ ಗಾಂಜಾ ಬೆಳೆದಿಲ್ಲ ಮತ್ತು ನಾವು ಅಲ್ಲಿ ಹೋಗಿ ದಾಳಿ ನಡೆಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾಂಜಾ ಬೀಜದ ಪ್ರಸಾರಣೆ ಗಾಳಿಯಿಂದ ಅಥವಾ ನೀರಿನಿಂದ ಅಥವಾ ಪ್ರಾಣಿ-ಪಕ್ಷಿ ಪ್ರಸಾರಣೆಯಿಂದ ಆಗುತ್ತದೆ ಅಂದರೆ ಸರಿಯಲ್ಲ. ಹೊಲದಲ್ಲಿ ಪ್ರಾಣಿ ಪಕ್ಷಿಗಳು ಬೆಳಿಗ್ಗೆಯಿಂದ ಹಾರಾಡುತ್ತೇವೆ ಮತ್ತು ಓಡಾಡುತ್ತಿರುತ್ತವೆ ಅಂದರೆ ಅಂತಹದ್ದು ನಮಗೆ ಕಂಡು ಬಂದಿಲ್ಲ. ನಾನು ಹೇಳಿದ ರೀತಿಯಲ್ಲಿ ಆರೋಪಿಯು ತನ್ನ ಜಮೀನಿನಲ್ಲಿ ಗಾಂಜಾ ಬೆಳೆದಿಲ್ಲ ಮತ್ತು ರೂಮ್ ನಲ್ಲಿ ರಟ್ಟಿನ ಬಾಕ್ಸ್ ನಲ್ಲಿ ಗಾಂಜಾ ಶೇಖರಣೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.